**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**
**ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು**-560 001.
**ದೂರವಾಣಿ**- 080-22224212

**ಸಂಖ್ಯೆ.** DPAR 07 CHULOSA (MC) 2024 **ದಿನಾಂಕ:** 29.04.2024

**ಸಾರ್ವತ್ರಿಕ ಲೋಕಸಭಾ ಚುನಾವಣೆ-2024**
**ಮತ್ತು ಉಪ ಚುನಾವಣೆ 36-ಸುರಪುರ ವಿಧಾನಸಭಾ ಕ್ಷೇತ್ರ-2024**
**ಪತ್ರಿಕಾ ಪ್ರಕಟಣೆ**

**1. ಅಗತ್ಯ ಸೇವೆಗಳ ಇಲಾಖೆಗಳ ಸಿಬ್ಬಂದಿಗಳಿಗೆ ಮತದಾನದ ವ್ಯವಸ್ಥೆ(AVES):**

3ನೇ ಹಂತದ 14 ಲೋಕಸಭಾ ಕ್ಷೇತ್ರಗಳಿಗೆ ದಿನಾಂಕ 07.05.2024 ರಂದು ನಡೆಯುವ ಮತದಾನದ ಸಮಯದಲ್ಲಿ ಭಾರತ ಚುನಾವಣಾ ಆಯೋಗವು ಸೂಚಿಸಲಾದ ಅಗತ್ಯ ಸೇವೆಗಳ ಇಲಾಖೆಗಳಿಗೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಗತ್ಯ ಸೇವೆಗಳ (AVES) ಇಲಾಖೆಗಳಲ್ಲಿ ಉದ್ಯೋಗದಲ್ಲಿರುವ ಸಿಬ್ಬಂದಿಗಾಗಿ ಅಂಚೆ ಮತದಾನ ಕೇಂದ್ರಗಳಲ್ಲಿ (PVC) ಮತದಾನಕ್ಕಾಗಿ ವ್ಯವಸ್ಥೆ ಮಾಡಲಾಗಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅಗತ್ಯ ಸೇವೆಗಳ ಇಲಾಖೆಯ ಸಿಬ್ಬಂದಿಗಳು ತಮ್ಮ ಮತ ಚಲಾಯಿಸಲು ಅಂಚೆ ಮತಪತ್ರ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ. AVES ಸಿಬ್ಬಂದಿಗಳು ಮತ ಚಲಾಯಿಸಲು ದಿನಾಂಕ 01.05.2024 ರಿಂದ 03.05.2024 ರವರೆಗೆ ಬೆಳಿಗ್ಗೆ 09:00 ರಿಂದ ಸಂಜೆ 05:00 ರವರೆಗೆ ಅಂಚೆ ಮತದಾನ ಕೇಂದ್ರಗಳನ್ನು (PVC) ತೆರೆಯಲಾಗಿದೆ.

ವಿವರವಾದ ಟಿಪ್ಪಣಿ ಮತ್ತು ಅಂಚೆ ಮತದಾನ ಕೇಂದ್ರಗಳ ಪಟ್ಟಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

**2. 3ನೇ ಹಂತದ ಲೋಕಸಭಾ ಕ್ಷೇತ್ರಗಳ ಮನೆಯಿಂದ ಮತದಾನದ ವಿವರ:**

85 ವರ್ಷಕ್ಕಿಂತ ಮೇಲ್ಪಟ್ಟ **21,347 (91.96%)** ಮತದಾರರು ಈವರೆಗೆ ತಮ್ಮ ಮನೆಯಿಂದ ಮತ ಚಲಾಯಿಸಿದ್ದಾರೆ, ಒಟ್ಟು **23,213** ಮತದಾರರಿಗೆ ಮನೆಯಿಂದ ಮತದಾನ ಮಾಡಲು ಅನುಮೋದಿಸಲಾಗಿದೆ. ಅದೇ ರೀತಿ ಶೇಕಡ 40% ಕ್ಕಿಂತ ಹೆಚ್ಚಿನ ದಿವ್ಯಾಂಗ ಮತದಾರರು (PwD) ತಮ್ಮ ಮನೆಯಿಂದ **10,282(94.36%)** ಮತ ಚಲಾಯಿಸಿದ್ದಾರೆ, ಒಟ್ಟು **10,897** ಮತದಾರರಿಗೆ ಮನೆಯಿಂದ ಮತದಾನ ಮಾಡಲು ದಿನಾಂಕ 28.04.2024 ರಿಂದ ಅನುಮೋದಿಸಲಾಗಿದೆ. ಒಟ್ಟು **34,110** ಮತದಾರರು ಮನೆಯಿಂದ ಮತದಾನ ಮಾಡಲು 12D ನಮೂನೆಯನ್ನು ಸಲ್ಲಿಸಿರುತ್ತಾರೆ. ಒಟ್ಟು ಈವರೆಗೆ **31,629(92.73%)** ಮತದಾರರು ಮನೆಯಿಂದ ತಮ್ಮ ಮತವನ್ನು ಚಲಾಯಿಸಿದ್ದಾರೆ.

### 3. ಚುನಾವಣಾ ವೆಚ್ಚದ ಮೇಲ್ವಿಚಾರಣೆ :

**ಜಪ್ತಿ:**

| ಜಪ್ತಿ ಮಾಡಲಾದ ವಸ್ತುಗಳು | | | ಪೊಲೀಸ್/ ಕ್ಷಿಪ್ರ ಪಡೆಗಳು (FST)/ ಸ್ಥಿರ ಕಣ್ಗಾವಲು ತಂಡಗಳು(SST)/ | | ಅಬಕಾರಿ | | ಆದಾಯ ತೆರಿಗೆ | | ವಾಣಿಜ್ಯ ತೆರಿಗೆ | | ಒಟ್ಟು ಮೊತ್ತ (ಮೌಲ್ಯ ರೂ. ಕೋಟಿಯಲ್ಲಿ) | |
|---|---|---|---|---|---|---|---|---|---|---|---|---|
| | | | ಹಿಂದಿನ ದಿನದವರೆಗೆ | ಇಲ್ಲಿಯವರೆಗೆ | ಹಿಂದಿನ ದಿನದವರೆಗೆ | ಇಲ್ಲಿಯವರೆಗೆ | ಹಿಂದಿನ ದಿನದವರೆಗೆ | ಇಲ್ಲಿಯವರೆಗೆ | ಹಿಂದಿನ ದಿನದವರೆಗೆ | ಇಲ್ಲಿಯವರೆಗೆ | ಹಿಂದಿನ ದಿನದವರೆಗೆ | ಇಲ್ಲಿಯವರೆಗೆ |
| ನಗದು | | ಮೌಲ್ಯ | 0.01 | 69.16 | - | - | - | 26.85 | - | - | 0.01 | 96.01 |
| ಮದ್ಯ | | Qty (in lakhs ltrs) | 0.00046 | 0.20 | 0.01 | 147.13 | - | - | - | - | 0.01 | 147.33 |
| | | ಮೌಲ್ಯ | 0.00122 | 0.83 | 0.05 | 177.55 | - | - | - | - | 0.05 | 178.37 |
| ಡ್ರಗ್ಸ್ | | Qty (KGs) | 11.39 | 486.30 | 44.29 | 117.55 | - | - | - | - | 55.68 | 603.84 |
| | | ಮೌಲ್ಯ | 0.11 | 11.18 | 0.0593 | 0.35 | - | - | - | - | 0.17 | 11.53 |
| ಅಮೂಲ್ಯ ಲೋಹ | ಚಿನ್ನ | Qty (KGs) | - | 70.58 | - | - | - | 30.37 | - | 36.31 | - | 137.25 |
| | | ಮೌಲ್ಯ | - | 43.22 | - | - | - | 20.02 | - | 13.51 | - | 76.75 |
| | ಬೆಳ್ಳಿ | Qty (KGs) | - | 294.78 | - | - | - | - | - | 7.59 | - | 302.37 |
| | | ಮೌಲ್ಯ | - | 1.12 | - | - | - | - | - | 0.06 | - | 1.18 |
| | ವಜ್ರ | Qty (carat) | - | - | - | - | - | 47.23 | - | - | - | 47.23 |
| | | ಮೌಲ್ಯ | - | - | - | - | - | 1.22 | - | - | - | 1.22 |
| ಉಚಿತ ಉಡುಗೊರೆ | | ಮೌಲ್ಯ | - | 2.41 | - | - | - | - | - | 6.23 | - | 8.64 |
| ಇತರೆ | | ಮೌಲ್ಯ | - | 12.22 | - | 0.03 | - | - | - | 60.31 | - | 72.55 |
| ಒಟ್ಟು ಮೊತ್ತ | | | **0.12** | **140.13** | **0.11** | **177.92** | **-** | **48.09** | **-** | **80.11** | **0.23** | **446.25** |

### 4. ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:

**a.** ಕ್ಷಿಪ್ರಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **2,215** ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

**b.** ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **3,215** ಪ್ರಕರಣಗಳನ್ನು ದಾಖಲಿಸಿದೆ, ಪರವಾನಗಿ ಉಲ್ಲಂಘನೆ ಅಡಿಯಲ್ಲಿ **5,167** ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **183** ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **30,639** ಪ್ರಕರಣಗಳನ್ನು ದಾಖಲಿಸಿದೆ, ಮತ್ತು **1,975** ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

### 5. ಸಾರ್ವಜನಿಕ ಕುಂದು ಕೊರತೆ ಪರಿಹಾರ:

ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **35,708** ಕರೆಗಳ ಪೈಕಿ **35,397** ಜನರು ಮಾಹಿತಿಯನ್ನು ಕೋರಿದ್ದಾರೆ, **39** ನಾಗರೀಕರು ಪ್ರತಿಕ್ರಿಯೆ ನೀಡಿದ್ದಾರೆ, **35** ನಾಗರೀಕರು ಸಲಹೆಗಳನ್ನು ನೀಡಿದ್ದಾರೆ ಮತ್ತು **237** ನಾಗರೀಕರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **35,708** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ NGRS ಪೋರ್ಟಲ್‌ನಲ್ಲಿ **20,370** ನಾಗರೀಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **19,247** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

### 6. ಸಿವಿಜಿಲ್ (cVIGIL):

cVIGIL ಅಪ್ಲಿಕೇಶನ್ ಮೂಲಕ **29,126** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **16,919** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **1,136** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಆಸ್ತಿ ವಿರೂಪಗೊಳಿಸುವಿಕೆ **345,** ಹಣವಿತರಣೆ **254**, ಉಡುಗೊರೆಗಳು/ಕೂಪನ್‌ಗಳ ವಿತರಣೆ **145,** ನಿಷೇಧದ ಅವಧಿಯಲ್ಲಿ ಪ್ರಚಾರ **70**, ಮದ್ಯಹಂಚಿಕೆ **158,** ಅನುಮತಿಯಿಲ್ಲದೆ ವಾಹನ ಬೆಂಗಾವಲು **138**, ಧಾರ್ಮಿಕ ಅಥವಾ ಸಮುದಾಯಿಕ ಭಾಷಣಗಳು/ಸಂದೇಶಗಳು **86,** ಬಂದೂಕುಗಳ ಪ್ರದರ್ಶನ ಬೆದರಿಕೆ **68,** ಇತರೆ **27,464** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

7. **ಮಾಧ್ಯಮ (Media):**

ಇಮೇಲ್ ಮೂಲಕ ಸ್ವೀಕರಿಸಿದ **342** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **849** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **39** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **79** ದೂರುಗಳು ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ಮೂಲಕ ಸ್ವೀಕರಿಸಿದ **81** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **1,390** ದೂರುಗಳ ಪೈಕಿ **1,390** ದೂರುಗಳನ್ನು ವಿಲೇವಾರಿ ಮಾಡಲಾಗಿದೆ

8. **ಸುವಿಧಾ (SUVIDHA):**

ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **10,372** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **8,432** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **1,341** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **47** ಅರ್ಜಿಗಳು ಪ್ರಗತಿಯಲ್ಲಿದೆ. **192** ಅರ್ಜಿಗಳು ಬಾಕಿ ಉಳಿದಿವೆ ಮತ್ತು **360** ಅರ್ಜಿಗಳನ್ನು ರದ್ದುಗೊಳಿಸಲಾಗಿ .

9. **ವಿಶೇಷ ವರದಿ:**

ಕಲಬುರಗಿ ಜಿಲ್ಲೆಯ ವಾಡಿ ರೈಲ್ವೇ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಿನಾಂಕ: 28.04.2024 ರಂದು ರೂ. **1.99** ಕೋಟಿ ನಗದು ಹಣವನ್ನು ವಾಹನ ಸಂಖ್ಯೆ KA69 777 ರಲ್ಲಿ ವಶಪಡಿಸಿಕೊಳ್ಳಲಾಗಿದೆ. ಈ ಕುರಿತಂತೆ ಕಲಬುರಗಿ ಮಾಜಿ ಮೇಯರ್ ಹಾಗೂ ಕಾಂಗ್ರೆಸ್ ಮುಖಂಡ **ಶರಣಕುಮಾರ್ ಮೋದಿ** ಸೇರಿದಂತೆ ಮೂವರ ವಿರುದ್ಧ ಎಫ್‌ಐಆರ್ ಸಂಖ್ಯೆ. **0054 /2024** ರ ಸೆಕ್ಷನ್ 123ರ, ಪ್ರಜಾ ಪ್ರಾತಿನಿಧ್ಯ ಕಾಯ್ದೆ ಮತ್ತು 171 (B,C,E,F) IPC ಯ ಅಡಿಯಲ್ಲಿ ಲಂಚ ಮತ್ತು ಅನಗತ್ಯ ಪ್ರಭಾವಕ್ಕಾಗಿ ಪ್ರಕರಣ ದಾಖಲಿಸಲಾಗಿದೆ.

*********

| **ಲೋಕಸಭಾ ಚುನಾವಣೆ 3ನೇ ಹಂತದ** (AVES) **ಅಂಚೆ ಮತದಾನ ಕೇಂದ್ರ**ಗಳ**(PVC)** ವಿಳಾಸ ಮತ್ತು **ವಿವರ** | | | |
|---|---|---|---|
| **ಕ್ರ. ಸಂ.** | **ಲೋಕಸಭಾ ಕ್ಷೇತ್ರಗಳು** | **ಅಂಚೆ ಮತದಾನ ಕೇಂದ್ರಗಳು ಕರ್ತವ್ಯ ನಿರ್ವಹಿಸುವ ದಿನಾಂಕ ಮತ್ತು ಸಮಯ** | **ಅಂಚೆ ಮತದಾನ ಕೇಂದ್ರ(PVC)ದ ವಿಳಾಸ** |
| 1 | 1- ಚಿಕ್ಕೋಡಿ | 01.05.2024 ರಿಂದ 03.05.2024 ಬೆಳಿಗ್ಗೆ 9:00 ರಿಂದ ಸಂಜೆ 5:00 ಗಂಟೆಯವರೆಗೆ | ತಹಶೀಲ್ದಾರ್ ಕಚೇರಿ ಕೋರ್ಟ್ ಹಾಲ್, ಬಸವೇಶ್ವರ ಸರ್ಕಲ್ ಹತ್ತಿರ, ಚಿಕ್ಕೋಡಿ |
| 2 | 2- ಬೆಳಗಾವಿ | | ಜಿಲ್ಲಾಧಿಕಾರಿ ಕಚೇರಿ (ಮುಜರಾಯಿ ವಿಭಾಗ), ನೆಲ ಮಹಡಿ, ಬೆಳಗಾವಿ |
| 3 | 3- ಬಾಗಲಕೋಟೆ | | ಜಿಲ್ಲಾಧಿಕಾರಿಗಳ ಕಛೇರಿ, ಬಾಗಲಕೋಟೆ ಜಿಲ್ಲಾಡಳಿತ ಭವನ ನವನಗರ, ಬಾಗಲಕೋಟೆ. |
| 4 | 4- ವಿಜಯಪುರ | | ಸಹಾಯಕ ನಿರ್ದೇಶಕರ ಕಛೇರಿ (IRA), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಡಿಸಿ ಕಛೇರಿ ಆವರಣ, SBI ATM ಎದುರು, ವಿಜಯಪುರ |
| 5 | 5- ಕಲಬುರಗಿ | | ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ (ಮಿನಿ ವಿಧಾನ ಸೌಧದ ಹತ್ತಿರ), ಸ್ಟೇಷನ್ ರಸ್ತೆ ಕಲಬುರಗಿ |
| 6 | 6- ರಾಯಚೂರು | | ತಹಶೀಲ್ದಾರ್ ಕಛೇರಿ ರಾಯಚೂರು |
| 7 | 7- ಬೀದರ್ | | 50-ಬೀದರ್ ARO ಕಚೇರಿ, ಸಹಾಯಕ ಆಯುಕ್ತರ ಕಚೇರಿ, ಡಿಸಿ ಕಚೇರಿ |
| 8 | 8- ಕೊಪ್ಪಳ | | ಮೀಟಿಂಗ್ ಹಾಲ್ ಡಿಸಿ ಕಛೇರಿ ಕೊಪ್ಪಳ |
| 9 | 9- ಬಳ್ಳಾರಿ | | ಗಾಂಧಿ ಭವನ, ಜಿಲ್ಲಾಧಿಕಾರಿ ಕಚೇರಿ, ರೈಲ್ವೆ ನಿಲ್ದಾಣದ ಎದುರು, ಬಳ್ಳಾರಿ |
| 10 | 10- ಹಾವೇರಿ | | RO ಆಫೀಸ್ ಕೋರ್ಟ್ ಹಾಲ್, ಹಾವೇರಿ |
| 11 | 11- ಧಾರವಾಡ | | ತಹಶೀಲ್ದಾರ್ ಕಛೇರಿ ಧಾರವಾಡ (ಚುನಾವಣಾ ಶಾಖೆ) |
| 12 | 12-ಉತ್ತರ ಕನ್ನಡ | | ಡಿಸಿ ಕಚೇರಿ, ಕಾರವಾರ |
| 13 | 13- ದಾವಣಗೆರೆ | | ಕೊಠಡಿ ಸಂಖ್ಯೆ 5, ಆಡಳಿತ ಕಚೇರಿ, ನೆಲ ಮಹಡಿ, ಸ್ಮಾರ್ಟ್ ಸಿಟಿ ಕಚೇರಿ, ದಾವಣಗೆರೆ |
| 14 | 14- ಶಿವಮೊಗ್ಗ | | ARO ಕಚೇರಿ, 1 ನೇ ಮಹಡಿ, ತಾಲೂಕು ಕಚೇರಿ, ಶಿವಮೊಗ್ಗ |

**ಅನುಬಂಧ-1**

ರಾಜ್ಯದಲ್ಲಿ ಈ ಕೆಳಕಂಡ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳನ್ನು ಅಗತ್ಯ ಸೇವೆಗಳ ಅಡಿಯಲ್ಲಿ ಬರುವ ಇಲಾಖೆಗಳೆಂದು ಭಾರತ ಚುನಾವಣಾ ಆಯೋಗದಿಂದ ಗುರುತಿಸಲ್ಪಟ್ಟಿವೆ :

The departments mentioned below are identified as essential service departments under the jurisdiction of the central and state governments in the state.

1. ವಿದ್ಯುಚ್ಛಕ್ತಿ ಇಲಾಖೆ (Electricity Department)
2. ಭಾರತ ಸಂಚಾರ ನಿಗಮ ನಿಯಮಿತ (BSNL)
3. ರೈಲ್ವೇ ಇಲಾಖೆ (Railways)
4. ದೂರದರ್ಶನ (Doordarshan)
5. ಆಕಾಶವಾಣಿ (All India Radio)
6. ಆರೋಗ್ಯ ಇಲಾಖೆ (Health Department)
7. ವಿಮಾನಯಾನ ಇಲಾಖೆ (Aviation)
8. ಸಾರಿಗೆ ಸೇವೆ (ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಹಾಗೂ ಎನ್‌ಇಕೆಆರ್‌ಟಿಸಿ) (Bus Service (KSRTC, BMTC, NWKRTC & NEKRTC)
9. ಅಗ್ನಿಶಾಮಕ ಸೇವೆಗಳು (Fire Services)
10. ಮತದಾನ ದಿನದ ಸುದ್ದಿಗಳನ್ನು ಪ್ರಸಾರ ಮಾಡಲು ಅಧಿಕೃತಗೊಳಿಸಿದ ಮಾಧ್ಯಮ ವರದಿಗಾರರು (Media Persons authorized by ECI for poll day coverage)
11. ಸಂಚಾರಿ ಪೊಲೀಸ್ (Traffic Police)
12. ಆಂಬ್ಯುಲೆನ್ಸ್ ಸೇವೆಗಳು (Ambulance Services)
13. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (BMRCL)
14. ಬಂದಿಖಾನೆ (Prisons)
15. ಕಂಟ್ರೋಲ್ ರೂಂ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳು (Police personnel working in control room)
16. ಗ್ರಾಮೀಣ ಮತ್ತು ನಗರ ಕುಡಿಯುವ ನೀರು ಸರಬರಾಜು ಇಲಾಖೆಯ ಅಭಿಯಂತರರು (Engineer of Rural and Urban drinking water supply Departments)